# ಭವಿಷ್ಯ ನಾಯಕನನ್ನು ಹುಡುಕುವ ಸ್ಪರ್ಧೆ
# (The Future Leader Discovery Contest)

**6 ನೆಯ ತರಗತಿಯಿಂದ ಹಿಡಿದು 12ನೆಯ ತರಗತಿಯ ಎಲ್ಲ ವಿದ್ಯಾರ್ಥಿಗಳೂ ಈ ಸ್ಪರ್ಧೆಗೆ ನೋಂದಾಯಿಸಿಕೊಳ್ಳಬಹುದು.**

**ಕಡೆಯ ದಿನಾಂಕ: 15.7.2011**

**ಮೊದಲನೆಯ ಹಂತ :**

**ಅರ್ಹತಾ ಹಂತ:** (ಆನ್‌ಲೈನ್ ಆಬ್ಜೆಕ್ಟಿವ್ ರಸಪ್ರಶ್ನೆ) ಸ್ಪರ್ಧಾರ್ಥಿಯು ಒಂದು ಅಥವಾ ಹೆಚ್ಚು ಪ್ರಯತ್ನಗಳನ್ನು ಮಾಡಬಹುದು. ಒಟ್ಟು ಸಮಯಾವಧಿ ಒಂದು ಗಂಟೆ ಮಾತ್ರ.

**ಎರಡನೆಯ ಹಂತ :**

ಸೆಮಿಫೈನಲ್ ಹಂತ (ಸಬ್‌ಜೆಕ್ಟಿವ್–ವಿಷಯಾಧಾರಿತ)

**ಮೂರನೆಯ ಹಂತ :**

ಅಂತಿಮ ಘಟ್ಟ (ಆಬ್ಜೆಕ್ಟಿವ್ ಮತ್ತು ಸಬ್‌ಜೆಕ್ಟಿವ್ – ಎರಡೂ ವಿಧಾನಗಳನ್ನು ಒಳಗೊಂಡದ್ದು)

**'ಭವಿಷ್ಯ ನಾಯಕನನ್ನು ಹುಡುಕುವ ಸ್ಪರ್ಧೆ'** (The Future Leader Discovery Contest) ಒಂದು ವಿಶಿಷ್ಟ ಉಚಿತ ಆನ್ ಲೈನ್ ಸ್ಪರ್ಧೆ. ಬೇರೆ ಸ್ಪರ್ಧೆಗಳಲ್ಲಿ ನಿಮ್ಮ ಕೌಶಲ ಮತ್ತು ಪ್ರತಿಭೆಗಳನ್ನು (ಉದಾಹರಣೆಗೆ ಕ್ರೀಡೆ, ಸಂಗೀತ, ಪಠ್ಯವಿಷಯ, ಸಾಮಾನ್ಯ ಜ್ಞಾನ ಮುಂತಾದವು) ಪರೀಕ್ಷಿಸಲಾಗುತ್ತದೆ. ಆದರೆ, ಈ ಸ್ಪರ್ಧೆಯು, ಇಂದಿನ ಬಹುತೇಕ ನಾಯಕರಿಗಿಂತ ಭಿನ್ನವಾಗಿರುವ ಭವಿಷ್ಯದ ನಾಯಕರಾಗುವ ಸಾಮರ್ಥ್ಯವನ್ನು ಶಾಲಾ ವಿದ್ಯಾರ್ಥಿಗಳು (6 ರಿಂದ 12 ನೆಯ ತರಗತಿ) ಎಷ್ಟರಮಟ್ಟಿಗೆ ಹೊಂದಿದ್ದಾರೆ ಎನ್ನುವುದನ್ನು ಗೊತ್ತುಪಡಿಸುತ್ತದೆ. ಅಂತಹ ಭವಿಷ್ಯನಾಯಕರು, ಸಾಮರ್ಥ್ಯದ ಜೊತೆಗೆ ಚಾರಿತ್ರ್ಯವನ್ನೂ, ಪರಿಣಾಮಕಾರಿ ಕ್ರಿಯಾಶೀಲತೆಯೊಡನೆ ಮೌಲ್ಯಗಳನ್ನೂ, ಪ್ರಾಯೋಗಿಕ ಮನೋಭಾವ ದೊಡನೆ ಆದರ್ಶಬುದ್ಧಿಯನ್ನೂ ಒಡಮೂಡಿಸಿ ಕೊಂಡಿರುತ್ತಾರೆ. ಯಾವ ಗುಣಗಳು ಇಂದಿನ ಯುವಕರಲ್ಲಿ ಅವಶ್ಯವಾಗಿ ಇರಲೇಬೇಕೆಂದು ಸ್ವಾಮಿ ವಿವೇಕಾನಂದರು ಇಚ್ಛಿಸಿದ್ದರೋ, ಅಂತಹ ಗುಣಗಳು ಅವರಲ್ಲಿ ಒಡ ಮೂಡಿರುತ್ತವೆ.



ನಿಮ್ಮಲ್ಲಿರುವ 'ಭವಿಷ್ಯ ನಾಯಕ'ನ ಸತ್ವವನ್ನು ಅರಿತುಕೊಳ್ಳಿ ಮತ್ತು ₹ 1,00,000, ₹ 80,000, ₹ 60,000, ₹ 40,000, ₹ 20,000 ಮೌಲ್ಯದ ಬಹುಮಾನಗಳನ್ನು ಗೆದ್ದುಕೊಳ್ಳಿ.

ಭವಿಷ್ಯ ನಾಯಕತ್ವದ ಇಂಥ ಸಾಮರ್ಥ್ಯವನ್ನು ಅಳೆಯಲಾದೀತೆ? ಖಂಡಿತ ಹೌದು. **'ಭವಿಷ್ಯ ನಾಯಕ ನನ್ನು ಹುಡುಕುವ ಸ್ಪರ್ಧೆ'** ಜೀವನದ ಕೆಲವು ಪ್ರಮುಖ ಅಂಶಗಳಲ್ಲಿ ನಿಮ್ಮ ಮನೋ ಧರ್ಮ ಮತ್ತು ದೃಷ್ಟಿಕೋನಗಳನ್ನು ಪರೀಕ್ಷಿಸುವ ಉದ್ದೇಶ ವನ್ನು ಹೊಂದಿದೆ. ಅವೆಂದರೆ, ಜವಾಬ್ದಾರಿ, ಸಮಾಜಕ್ಕೆ ನಿಮ್ಮ ಕೊಡುಗೆ, ನಿಮ್ಮ ಸ್ವಂತ ಬಯಕೆಗಳು, ಕಳಕಳಿ ಮುಂತಾದವು.

ನಿಮ್ಮ ಕುಟುಂಬ, ಸ್ನೇಹಿತರು, ಸಹವರ್ತಿಗಳು ಮತ್ತು ಸಮಾಜದ ಜೊತೆಗೆ ನೀವು ವ್ಯವಹರಿಸುವಾಗ ಮೇಲಿನ ಗುಣಗಳು ಹೇಗೆ ಪ್ರಕಟವಾಗುತ್ತವೆ ಎಂದು ಗೊತ್ತುಮಾಡಿ ಕೊಳ್ಳುವುದೇ ಈ ಸ್ಪರ್ಧೆಯ ಉದ್ದೇಶವಾಗಿದೆ. ಒಟ್ಟಿನಲ್ಲಿ ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳುವ ಮೂಲಕ, ಭಾರತ ದೇಶದ ಭವಿಷ್ಯ ನಾಯಕರಾಗಲು ನಿಮ್ಮಲ್ಲಿ ಅಂತರ್ಗತವಾಗಿರುವ ಸಾಮರ್ಥ್ಯವನ್ನು ನೀವು ಕಂಡುಕೊಳ್ಳ ಬಹುದು.

**ಹೇಗೆ ಭಾಗವಹಿಬಹುದು?**

**ಯಾವ ಶುಲ್ಕವೂ ಇಲ್ಲ.**

**ನೀವು ಈ ಭಾಷೆಗಳಲ್ಲಿ ಒಂದನ್ನು ಆರಿಸಿ ಕೊಳ್ಳಬಹುದು: ಇಂಗ್ಲಿಷ್, ಕನ್ನಡ, ಹಿಂದಿ, ಬಂಗಾಳಿ, ಗುಜರಾತಿ, ತಮಿಳು**

**ನೋಂದಣಿ: awkeningindia.org** – ಈ ವೆಬ್‌ಸೈಟ್‌ಗೆ ಹೋಗಿ, ಅದರಲ್ಲಿ programmes ಮೆನುವಿನಲ್ಲಿ ಆನ್‌ಲೈನ್ ಸ್ಪರ್ಧೆಯನ್ನು ಆಯ್ಕೆ ಮಾಡಿಕೊಳ್ಳಿ. ಸ್ಕ್ರೀನ್‌ನಲ್ಲಿ 'Register' ಬಟನ್ ಅನ್ನು ಒತ್ತಿ. ಇದು ನಿಮ್ಮನ್ನು ನೋಂದಣಿಯ ಸ್ಕ್ರೀನ್‌ಗೆ ಕರೆದುಕೊಂಡು ಹೋಗುತ್ತದೆ.

2. ನೋಂದಣಿ ಫಾರಂ ಅನ್ನು ಭರ್ತಿಮಾಡಿ ನೋಂದಣಿ ಮಾಡಿಕೊಳ್ಳಿ. ಫಾರಂನಲ್ಲಿನ ಎಲ್ಲ ಆವಶ್ಯಕ ವಿವರಗಳನ್ನೂ ತಪ್ಪದೆ ಭರ್ತಿಮಾಡಿ.

**ಈ ಸ್ಪರ್ಧೆಯಲ್ಲಿ ಭಾಗವಹಿಸಲು ಎಲ್ಲಾ ಶಾಲಾಕಾಲೇಜು ವಿದ್ಯಾರ್ಥಿಗಳಿಗೂ ಮುಕ್ತ ಸ್ವಾಗತ.**

**Awkening India - ಎಚ್ಚೆತ್ತ ಭಾರತ (ಸ್ವಾಮಿ ವಿವೇಕಾನಂದರ 150 ನೇ ಜಯಂತಿ ಮಹೋತ್ಸವ)**

# ಭಕ್ತಿ

ಶ್ರೀರಾಮಕೃಷ್ಣರು ಶ್ರೇಷ್ಠ ಭಕ್ತರು. ಅವರು ತಮ್ಮ ಜೀವನದಲ್ಲಿ ಅತ್ಯಂತ ಉನ್ನತ ದೈವೀಪ್ರೇಮವನ್ನು ಪ್ರಕಟಪಡಿಸಿದ್ದಾರೆ. ಭಕ್ತಿಭಾವವು ಅವರ ವ್ಯಕ್ತಿತ್ವದಲ್ಲಿ ಪರಿಪೂರ್ಣವಾಗಿ, ಉಜ್ವಲವಾಗಿ ಒಡಮೂಡಿದೆ. ಹಾಗೆಂದೇ ಅವರ ಉಪದೇಶಗಳು ಮತ್ತು ಕಥೆಗಳಲ್ಲಿ ಭಕ್ತಿಸಾಧನೆಯ ಬಗೆಗಿನ ಅಧಿಕೃತತೆಯ ಛಾಪನ್ನು ಕಾಣುತ್ತೇವೆ; ಅನುಭವದ ಅಗಾಧತೆಯನ್ನು ಕಂಡುಕೊಳ್ಳುತ್ತೇವೆ; ಭಾವನೆಯ ಉತ್ಕಟತೆಯನ್ನು ಗುರುತಿಸುತ್ತೇವೆ.

"ಪ್ರಾಪಂಚಿಕರು ನಿಜವಾಗಿ ಆಶಿಸುವುದು ಕೆಲಸಕ್ಕೆ ಬಾರದ ವಿಷಯವಸ್ತುಗಳನ್ನು. ಇಂಥ ಪ್ರಾಪಂಚಿಕತೆಯಿಂದ ಮೈಲಿಗೆಯಾಗದ ಶುದ್ಧಹೃದಯರಿಗೆ ಮಾತ್ರವೇ ದೇವರನ್ನು ಸಂಪೂರ್ಣ ಪ್ರೀತಿಸುವ ಚಿತ್ತೈಕಾಗ್ರತೆಯು ಪ್ರಾಪ್ತವಾಗುತ್ತದೆ" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. **ಪ್ರೀತಿರೂಪಮ್ ಅನುಧ್ಯಾನಮ್ ಭಕ್ತಿರಿತ್ಯಭಿಧೀಯತೇ** – 'ಪ್ರೇಮರೂಪವಾದ ಧ್ಯಾನವೇ ಭಕ್ತಿಯ ಲಕ್ಷಣ' ಎನ್ನುವ ಪ್ರಾಚೀನ ಉಕ್ತಿಯು ಇದನ್ನು ಸ್ಪಷ್ಟಪಡಿಸುತ್ತದೆ. ಹೀಗೆ ದೇವರನ್ನು ಸಂಪೂರ್ಣವಾಗಿ ಪ್ರೀತಿಸುವಲ್ಲಿನ ಪರಿಪೂರ್ಣ ಮಾನಸಿಕ ಏಕಾಗ್ರತೆಯನ್ನೇ ನಾವು 'ಭಕ್ತಿ' ಎಂದು ಕರೆಯಬಹುದು. ಹೀಗೆ ಭಕ್ತಿಯಲ್ಲಿ ಎರಡು ಮುಖ್ಯ ಅಂಶಗಳಿವೆ: ೧. ದೇವರಲ್ಲಿ ಸಂಪೂರ್ಣ ಪ್ರೀತಿ, ೨. ಪರಿಪೂರ್ಣ ಮಾನಸಿಕ ಏಕಾಗ್ರತೆ. ಇವೆರಡೂ ಜೊತೆಜೊತೆಗೇ ಮೂಡುತ್ತವೆ.

ಶ್ರೀರಾಮಕೃಷ್ಣರ ಈ ಮಾತು ಶಾಸ್ತ್ರಸಮ್ಮತವಾದುದು. ಭಕ್ತಿಶಾಸ್ತ್ರದ ಶ್ರೇಷ್ಠ ಆಕರ ಗ್ರಂಥವಾಗಿರುವ 'ಭಾಗವತ' ಕೂಡ ಇದೇ ಅಭಿಪ್ರಾಯವನ್ನು ಹೀಗೆ ವ್ಯಕ್ತಪಡಿಸುತ್ತದೆ: ಮನುಷ್ಯನ ವ್ಯಕ್ತಿತ್ವದಲ್ಲಿ ಮೂರು ಅಂಶಗಳಿವೆ – ಜ್ಞಾನಾಂಗಗಳು, ಕರ್ಮಾಂಗಗಳು ಮತ್ತು ಮನಸ್ಸು. ಇವುಗಳ ಶಕ್ತಿಯನ್ನು ಬಳಸಿಕೊಂಡೇ ನಾವು ನಮ್ಮೆಲ್ಲ ಕೆಲಸಕಾರ್ಯಗಳನ್ನು ಮಾಡುವುದು. ಇವುಗಳೆಲ್ಲದರ ಶಕ್ತಿಗಳನ್ನು ಒಟ್ಟುಗೂಡಿಸಬೇಕು, ಒಮ್ಮುಖ ಮಾಡಬೇಕು, ಒಂದೇ ರೀತಿಯ ಮಾನಸಿಕ ವೃತ್ತಿಯನ್ನಾಗಿ ಮಾರ್ಪಡಿಸಬೇಕು. ಅಂಥ ಅಖಂಡವೃತ್ತಿಯು ಪರಮಪುರುಷನಾದ ಭಗವಂತನ ಕಡೆಗೆ, ಸಹಜವಾಗಿ, ಯಾವ ಪ್ರಯತ್ನವೂ ಇಲ್ಲದೆ ಹರಿಯಬೇಕು. ಆಗ ಶ್ರೇಷ್ಠಮಟ್ಟದ ಮಾನಸಿಕ ಸ್ಥಿತಿ ಭಕ್ತನಲ್ಲಿ ಉಂಟಾಗುತ್ತದೆ. ಅದನ್ನೇ 'ಭಕ್ತಿ' ಎಂದು ಕರೆಯುವುದು. ಇದು 'ಮುಕ್ತಿ'ಗಿಂತಲೂ ಅಮೂಲ್ಯವಾದುದು. ಜಠರಾಗ್ನಿಯು ಆಹಾರವನ್ನು ದಹಿಸಿ ಜೀರ್ಣಿಸಿಬಿಡುತ್ತದೆ; ಇದೇರೀತಿ ಭಕ್ತಿಯು ಮಾನವನ ಅಜ್ಞಾನದ ಆವರಣವನ್ನು ಕರಗಿಸಿಬಿಡುತ್ತದೆ (*ಭಾಗವತ*, ೩:೨೫:೩೨–೩೩).

## ಭಕ್ತಿ ಎಂಬ ಶ್ರೇಷ್ಠ ವಸ್ತು

ಭಗವಂತನಿಗೆ ನಾವು ನೀಡುವ ಶ್ರೇಷ್ಠ ವಸ್ತುವೇ 'ಪ್ರೀತಿ' ಎಂಬುದು ಶ್ರೀರಾಮಕೃಷ್ಣರ ಅಭಿಪ್ರಾಯ. ಪತ್ರವನ್ನಾಗಲಿ, ಪುಷ್ಪವನ್ನಾಗಲಿ, ಫಲವನ್ನಾಗಲಿ, ನೀರನ್ನಾಗಲಿ ಯಾರು ಭಕ್ತಿಯಿಂದ ಕೊಡುತ್ತಾರೆಯೋ ಅಂಥವರಿಗೆ ಒಲಿಯುತ್ತೇನೆ ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. ಹೀಗಾಗಿ ಪ್ರೀತಿಯೇ ನಾವು ಭಗವಂತನಿಗೆ ಕೊಡಬಹುದಾದ, ಕೊಡಬೇಕಾದ ಅತ್ಯಂತ ಮಹತ್ವದ ವಸ್ತು. ಇದಕ್ಕೆ ಶ್ರೀರಾಮಕೃಷ್ಣರು ಶ್ರೀಮಂತರ ಮನೆಯ ಆಳಿನ ನಿದರ್ಶನವನ್ನು ನೀಡುತ್ತಾರೆ. ಒಮ್ಮೆ ಒಬ್ಬ ಶ್ರೀಮಂತರ ಆಳು ಭಯಭಕ್ತಿಯಿಂದ ಬಂದು ಯಜಮಾನರ ಮುಂದೆ ಬಂದು ನಿಂತನು. ಕೈಯಲ್ಲಿ ಏನನ್ನೋ ಬಚ್ಚಿಟ್ಟುಕೊಂಡಿದ್ದನು. ಶ್ರೀಮಂತನು ವಿಚಾರಿಸಲು, ಒಳಗಿನಿಂದ ಒಂದು ಸೀತಾಫಲವನ್ನು ತೆಗೆದು ಕೊಟ್ಟನು. ಯಜಮಾನನಿಗೆ ಆಳಿನ ಭಕ್ತಿಯನ್ನು ಕಂಡು ತುಂಬಾ ಸಂತೋಷವಾಯಿತು. ಕೊಟ್ಟದ್ದು ಅತ್ಯಂತ ಅಲ್ಪವಸ್ತು. ಆದರೆ ಯಜಮಾನ ಆಳಿನ ಅಂತರಂಗವನ್ನು ನೋಡಿದನು. ಹಾಗೆಯೇ ದೇವರೂ ನಾವು ಕೊಡುವ ವಸ್ತುವಿನ ಮೌಲ್ಯವನ್ನು ಪರಿಗಣಿಸುವುದಿಲ್ಲ. ಅದಕ್ಕೆಂದೇ ಸಂಸ್ಕೃತದಲ್ಲಿ **ಭಾವಗ್ರಾಹೀ ಜನಾರ್ದನಃ** ಎಂಬ ಮಾತನ್ನು ಹೇಳುತ್ತಾರೆ. ಅಂದರೆ ದೇವರು ನಮ್ಮ ಹೃದಯದ ಭಾವವನ್ನು ನೋಡುತ್ತಾನೆ. ಆ ಪ್ರೀತಿ ಅಥವಾ ಭಕ್ತಿಯೇ ಅತ್ಯಂತ ಅಮೂಲ್ಯ ವಸ್ತು.

'ಪ್ರೀತಿ' ಮತ್ತು 'ಪ್ರೀತಿಸುವುದು' – ಇದೇ ಬಹು ಮುಖ್ಯವಾಗಿರುವುದು. ಪ್ರೀತಿಯಲ್ಲಿ ಸ್ಪರ್ಧೆಯಾಗಲಿ, ಪ್ರತಿಫಲಾಪೇಕ್ಷೆಯಾಗಲಿ ಅಥವಾ ಭಯವಾಗಲಿ ಇರುವುದಿಲ್ಲ ಎಂದು ಸ್ವಾಮಿ ವಿವೇಕಾನಂದರು ತಮ್ಮ 'ಭಕ್ತಿಯೋಗ'ದಲ್ಲಿ ಹೇಳುತ್ತಾರೆ. ಭಕ್ತನು ತನ್ನ ಪ್ರೀತಿಗೆ ಪ್ರತಿಯಾಗಿ ಏನನ್ನೂ ನಿರೀಕ್ಷಿಸಬಾರದು ಎನ್ನುವುದಕ್ಕೆ ಒಂದು ಸುಂದರ ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು: ಅರ್ಜುನನಿಗೆ ತಾನು ದೊಡ್ಡ ಭಕ್ತನೆಂದು ಅಹಂಕಾರ ಬಂತು. ಶ್ರೀಕೃಷ್ಣನಿಗೆ ಅದು ಗೊತ್ತಾಯಿತು. ಅವರಿಬ್ಬರೂ ಒಮ್ಮೆ ವಾಯುವಿಹಾರಕ್ಕೆ ಹೊರಟರು. ಅವರು ಸ್ವಲ್ಪದೂರ ಹೋದರು. ದಾರಿಯಲ್ಲಿ ಒಬ್ಬ

ಬಡ ಬ್ರಾಹ್ಮಣ ಕಾಣಿಸಿಕೊಂಡ. ಅವನ ವರ್ತನೆ ವಿಚಿತ್ರವಾಗಿತ್ತು. ಅವನು ಸೊಂಟದಲ್ಲಿ ಕತ್ತಿಯನ್ನು ಕಟ್ಟಿಕೊಂಡಿದ್ದ. ಒಣ ಹುಲ್ಲನ್ನು ಮಾತ್ರ ತಿನ್ನುತ್ತಿದ್ದ. "ಅವನು ಎಳೆ ಹುಲ್ಲನ್ನೂ ಹಿಂಸಿಸಲು ಇಷ್ಟಪಡುವುದಿಲ್ಲ. ಅದಕ್ಕೇ ಒಣಹುಲ್ಲನ್ನು ತಿನ್ನುತ್ತಿದ್ದಾನೆ. ಆದರೆ, ಕತ್ತಿಯನ್ನು ಕಟ್ಟಿಕೊಂಡಿದ್ದಾನಲ್ಲ!" ಎಂದು ಅರ್ಜುನನಿಗೆ ಆಶ್ಚರ್ಯವಾಯಿತು. ಕೃಷ್ಣನ ಆಣತಿಯಂತೆ ಆ ಬ್ರಾಹ್ಮಣನನ್ನೇ ಕೇಳಿದ. ಅದಕ್ಕೆ ಬ್ರಾಹ್ಮಣ, "ನನಗೇನಾದರೂ ಸಿಕ್ಕಿದರೆ ಆ ನಾಲ್ಕು ಜನರನ್ನು ಕೊಲ್ಲುವುದಕ್ಕೆ ಕತ್ತಿಯನ್ನು ಇರಿಸಿಕೊಂಡಿದ್ದೇನೆ" ಎಂದ. ಯಾರು ಅವರು ಎಂದು ಅರ್ಜುನ ಕೇಳಿದ್ದಕ್ಕೆ ಬ್ರಾಹ್ಮಣ ಹೀಗೆ ಹೇಳಿದ: "ಮೊದಲನೆಯವನೇ ದುರಾತ್ಮನಾದ ನಾರದ. ಯಾವಾಗಲೂ ಹರಿಯ ನಾಮಸ್ಮರಣೆ ಮಾಡುತ್ತ ದೇವರಿಗೆ ವಿರಾಮಕ್ಕೆ ಅವಕಾಶವನ್ನೇ ನೀಡುವುದಿಲ್ಲ. ಎರಡನೆಯವಳೇ ದ್ರೌಪದಿ. ಅವಳು ದುರ್ವಾಸನ ಶಾಪಕ್ಕೆ ಹೆದರಿ, ಊಟ ಮಾಡುತ್ತಿದ್ದ ನನ್ನ ಭಗವಂತನನ್ನು ಎಬ್ಬಿಸುವಂತಹ ದುಡುಕುತನ ಮಾಡಿದಳು. ಮೂರನೆಯವನು ಎಂದರೆ ಪ್ರಹ್ಲಾದ. ಅವನನ್ನು ರಕ್ಷಿಸಲು ಭಗವಂತನು ಅದೆಷ್ಟು ಕಷ್ಟಪಡಬೇಕಾಯಿತು! ನಾಲ್ಕನೆಯವನು ಎಂದರೆ ಅರ್ಜುನ. ಅವನು ಕುರುಕ್ಷೇತ್ರ ಯುದ್ಧದಲ್ಲಿ ಶ್ರೀಕೃಷ್ಣನಿಂದ ಸಾಮಾನ್ಯ ರಥವನ್ನು ನಡೆಸುವ ಕೆಲಸಮಾಡಿಸಿದ!" ಅರ್ಜುನನಿಗೆ ಆ ಬಡ ಬ್ರಾಹ್ಮಣನಲ್ಲಿ ಇದ್ದ ಶ್ರದ್ಧೆ ಭಕ್ತಿಯನ್ನು ನೋಡಿ ಆಶ್ಚರ್ಯವಾಯಿತು. ಅವನ ದುರಹಂಕಾರ ಹೋಯಿತು.

ಭಕ್ತಿಯ ಇನ್ನೊಂದು ಲಕ್ಷಣವಾದ ಏಕಾಗ್ರತೆಯ ಬಗ್ಗೆಯೂ ಶ್ರೀರಾಮಕೃಷ್ಣರು ಒಂದು ಉತ್ತಮವಾದ ಕಥೆಯನ್ನು ಹೇಳುತ್ತಾರೆ: ಒಬ್ಬ ಮೀನು ಹಿಡಿಯುತ್ತಿದ್ದ. ಮೀನಿಗೆ ಇಟ್ಟಿದ್ದ ಬೆಂಡು ಚಲಿಸತೊಡಗಿತು. ಬೆಸ್ತ ಗಾಳವನ್ನು ಗಟ್ಟಿಯಾಗಿ ಹಿಡಿದುಕೊಂಡಿದ್ದ. ಅದನ್ನು ಇನ್ನೇನು ಮೇಲೆತ್ತಬೇಕು, ಆಗ ಒಬ್ಬ ಯಾರದೋ ಮನೆಯ ವಿಳಾಸ ಕೇಳಿದ. ಬೆಸ್ತ ಯಾವ ಉತ್ತರವನ್ನೂ ನೀಡಲಿಲ್ಲ. ಇನ್ನೊಬ್ಬ ವ್ಯಕ್ತಿ ಮತ್ತೆ ಮತ್ತೆ ಅದನ್ನೇ ಕೇಳಿದ. ಮೀನು ಹಿಡಿಯುವುದರಲ್ಲಿ ಮಗ್ನನಾಗಿದ್ದ ಬೆಸ್ತನಿಗೆ ಅವನ ಮಾತು ಕೇಳಲೇ ಇಲ್ಲ. ಅವನ ಕಣ್ಣುಗಳು ಗಾಳಕ್ಕೆ ಕಟ್ಟಿದ ಬೆಂಡನ್ನೇ ನೋಡುತ್ತಿದ್ದವು. ಕೇಳುವವನಿಗೆ ಬೇಜಾರಾಗಿ, ಮುಂದೆ ಹೋದ. ಅಷ್ಟರಲ್ಲಿ ಗಾಳಕ್ಕೆ ಮೀನು ಸಿಕ್ಕಿಬಿದ್ದಿತು. ಬೆಸ್ತ ಮೀನನ್ನು ಮೆಲಕ್ಕೆ ಎತ್ತಿದ. ಈಗ ಅಕ್ಕಪಕ್ಕ ಗಮನ ಹರಿಸಿದ, ಅವನು ಹೋಗುತ್ತಿದ್ದವನನ್ನು ಕೂಗಿ ಕರೆದು, "ಏನು ಬೇಕು?" ಎಂದು ಕೇಳಿದ. "ನಿನ್ನನ್ನು ಎಷ್ಟೊಂದು ಕೂಗಿ ಕರೆದೆ. ಆದರೂ ನೀನು ಉತ್ತರಿಸಲಿಲ್ಲ" ಎಂದು ಅವನು ದೂರಿದ. ಅದಕ್ಕೆ ಬೆಸ್ತ ಹೀಗೆ ಹೇಳಿದ, "ನನ್ನ ಮೀನಿನ ಬೆಂಡು ನೀರಿನಲ್ಲಿ ಮುಳುಗುವುದರಲ್ಲಿತ್ತು. ಅದಕ್ಕೇ ನೀನು ಹೇಳಿದ್ದು ಏನೂ ಕೇಳಿಸಲಿಲ್ಲ." "ಯಾವನು **ಅನನ್ಯಚೇತಾಃ** ಅಂದರೆ, ಬೇರೆ ಯಾವ ವಿಷಯದಲ್ಲಿಯೂ ಮನಸ್ಸಿಲ್ಲದವನಾಗಿ, ನಿರಂತರವಾಗಿ ನನ್ನನ್ನು ಸ್ಮರಿಸುವನೋ ಆ ಯೋಗಿಗೆ ನಾನು ಸುಲಭವಾಗಿ ದೊರೆಯುತ್ತೇನೆ" ಎಂದು ಶ್ರೀಕೃಷ್ಣನು ಭಗವದ್ಗೀತೆಯಲ್ಲಿ ಹೇಳುತ್ತಾನೆ. ಈ ಅನನ್ಯ ಏಕಾಗ್ರತೆ ಭಕ್ತಿಯ ಒಂದು ಪ್ರಮುಖ ಗುಣ.

### ಭಕ್ತಿಸಾಧನೆ

ಭಕ್ತಿಯ ವಿವಿಧ ಪ್ರಾಯೋಗಿಕ ಅಂಶಗಳನ್ನು ಹಲವಾರು ಕಥಾಪ್ರಸಂಗಗಳ ಮೂಲಕ ಶ್ರೀರಾಮಕೃಷ್ಣರು ಸರಳವಾಗಿ, ಅದೇ ಸಮಯದಲ್ಲಿ ಅತ್ಯಂತ ಖಚಿತವಾಗಿ ನಮಗೆ ತಿಳಿಸಿಕೊಡುತ್ತಾರೆ. ಅವುಗಳಲ್ಲಿ ಕೆಲವನ್ನು ಈಗ ನೋಡೋಣ:

೧. **ತನ್ನ ಇಷ್ಟದೇವತೆಯ ಮೇಲೆ ಸಂಪೂರ್ಣವಾದ ನಿಷ್ಠೆ** ಎನ್ನುವುದು ಭಕ್ತಿಸಾಧನೆಯ ಒಂದು ಮುಖ್ಯ ಅಂಶ. "ಯಾವುದಾದರೂ ಒಂದು ಭಾವವನ್ನು ದೃಢವಾಗಿ ನಂಬಿ ನೀವು ಭಗವಂತನನ್ನು ನಿಮ್ಮವನನ್ನಾಗಿ ಮಾಡಿಕೊಳ್ಳಬೇಕು" ಎಂದು ಶ್ರೀರಾಮಕೃಷ್ಣರು ಹೇಳುತ್ತಾರೆ. ಇಷ್ಟದೇವತೆಯ ಆವಶ್ಯಕತೆಯ ಬಗ್ಗೆ ಅವರು ನೀಡುವ ಉಪದೇಶ ಹೀಗಿದೆ: "ಮನೆಯ ಕಿರಿಯ ಯಜಮಾನಿ ತನ್ನ ಮಾವ ಮತ್ತು ಅತ್ತೆಯವರನ್ನು ಪ್ರೀತಿಸುವಳು. ಅವರಿಗೆ ಉಪಚಾರವನ್ನು ಮಾಡುವಳು. ಅವರ ಮಾತನ್ನು ಅಲ್ಲಗಳೆಯುವುದಿಲ್ಲ ಅಥವಾ ಅಸಡ್ಡೆಯಿಂದ ನೋಡುವುದಿಲ್ಲ. ಆದರೂ ತನ್ನ ಯಜಮಾನನನ್ನು ಮಾತ್ರ ಅತಿಶಯವಾಗಿ ಪ್ರೀತಿಸುವಳು. ಇದೇ ರೀತಿಯಲ್ಲಿ ನಿನ್ನ ಇಷ್ಟದೇವತೆಯ ಆರಾಧನೆಯಲ್ಲಿ ಅಚಲನಾಗಿರು. ಆದರೆ ಇತರ ದೇವರನ್ನು ತಾತ್ಸಾರದಿಂದ ಕಾಣಬೇಡ. ಅವುಗಳನ್ನು ಗೌರವಿಸು. ಏಕೆಂದರೆ ಅವುಗಳಲ್ಲೆಲ್ಲಾ ಕಾಣುವುದು ಒಂದೇ ಶಕ್ತಿ ಮತ್ತು ಪ್ರೇಮ."

ಇದನ್ನು ಸೂಚಿಸುವ ಕಥೆಯೊಂದನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು: ಒಮ್ಮೆ ಪಾಂಡವರು ರಾಜಸೂಯ ಯಾಗವನ್ನು ಮಾಡಿದರು. ಎಲ್ಲರೂ ಯುಧಿಷ್ಠಿರನಿಗೆ ಅಗ್ರಸ್ಥಾನವನ್ನು ಕೊಟ್ಟು ಅವನಿಗೆ ನಮಸ್ಕರಿಸಿದರು. ಆದರೆ ಲಂಕಾಧಿಪತಿಯಾದ ವಿಭೀಷಣ, ತಾನು ಶ್ರೀಮನ್ನಾರಾಯಣನಿಗಲ್ಲದೆ, ಬೇರೆ ಯಾರಿಗೂ ನಮಸ್ಕರಿಸುವುದಿಲ್ಲ ಎಂದು ಹೇಳುತ್ತಾನೆ. ಆಗ ಯುಧಿಷ್ಠಿರನಿಗೆ ಶ್ರೀಕೃಷ್ಣನೇ ನಮಸ್ಕರಿಸಿದನು. ಆಗ ಮಾತ್ರ ವಿಭೀಷಣನು ಯುಧಿಷ್ಠಿರನಿಗೆ ನಮಸ್ಕರಿಸಿದನು. ಶ್ರೀರಾಮಕೃಷ್ಣರು ಹೀಗೆ ಹೇಳುತ್ತಾರೆ: "ಇದೇ ಏಕನಿಷ್ಠಾಭಕ್ತಿ. ಅಲ್ಲಿ ಸಾಧಕನು ಇಷ್ಟದೇವರ ವಿನಾ ಬೇರೆ ಯಾರನ್ನೂ ಗಮನಿಸುವುದಿಲ್ಲ. ಕಮಲ ಸೂರ್ಯನ ಕಿರಣಗಳಿಗಾಗಿ ಏಕನಿಷ್ಠೆಯಿಂದ ಕಾಯುವಂತೆ ಭಗವಂತನಲ್ಲಿ ಭಕ್ತಿಯಿರಬೇಕು."

೨. **ಭಗವಂತನು ಅಪೇಕ್ಷಿಸುವುದು ಆಡಂಬರ ಅಥವಾ ಪ್ರದರ್ಶನವನ್ನಲ್ಲ. ಅವನಿಗೆ ಸರಳಭಕ್ತಿಯಷ್ಟೇ ಸಾಕು.** ಭಕ್ತಿ ಮಾಡುವುದಕ್ಕೆ ಪಾಂಡಿತ್ಯವೇನೂ ಬೇಕಾಗಿಲ್ಲ. ಇದನ್ನು ತೋರಿಸುವ ಎರಡು ಸುಂದರ ಪ್ರಸಂಗಗಳನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು. ಅದರಲ್ಲಿ ಮೊದಲನೆಯದು ಗಣೇಶ ಮತ್ತು ಕಾರ್ತಿಕೇಯರಿಗೆ ಸಂಬಂಧಪಟ್ಟುದು. ಇಬ್ಬರೂ ಪಾರ್ವತಿಯ ಮಕ್ಕಳು. "ಯಾರು ಪ್ರಪಂಚವನ್ನು ಮೊದಲು ಸುತ್ತಿಕೊಂಡು ಬರುತ್ತಾರೋ, ಅವರಿಗೆ ನನ್ನ ಕೊರಳ ಹಾರವನ್ನು ಬಹುಮಾನವಾಗಿ ಕೊಡುತ್ತೇನೆ" ಎಂದು ಪಾರ್ವತಿ ಹೇಳಿದಳು. ಒಡನೆ ಕಾರ್ತಿಕೇಯನು ತನ್ನ ವಾಹನವಾದ ನವಿಲನ್ನು ಹತ್ತಿ, ಭೂಮಿಯನ್ನು ಪ್ರದಕ್ಷಿಣೆ ಮಾಡಲು ಹೊರಟನು. ಗಣೇಶ ನಿಧಾನವಾಗಿ ಎದ್ದು, ತನ್ನ ತಾಯಿ ಪಾರ್ವತಿಯ ಸುತ್ತಲೂ ಪ್ರದಕ್ಷಿಣೆ ಮಾಡಿ ನಮಸ್ಕರಿಸಿದ. ಭಗವತಿಯಾದ ತನ್ನ ತಾಯಿಯೇ ಇಡೀ ಪ್ರಪಂಚವನ್ನೆಲ್ಲ ಅಡಗಿಸಿಕೊಂಡಿದ್ದಾಳೆ ಎಂದು ಅವನ ನಂಬಿಕೆ. ಈ ಸರಳಭಕ್ತಿಗೆ ಪಾರ್ವತಿ ಮೆಚ್ಚಿದಳು. ತನ್ನ ಕೊರಳ ಹಾರವನ್ನು ಅವನಿಗೆ ಕೊಟ್ಟಳು. ಇನ್ನೊಂದು ಕಥೆ ಶ್ರೀಕೃಷ್ಣಚೈತನ್ಯರ ಜೀವನದಲ್ಲಿ ನಡೆದದ್ದು. ಅವರು ದಕ್ಷಿಣ ಭಾರತಕ್ಕೆ ಹೋಗಿದ್ದರು. ಅಲ್ಲಿ ಒಬ್ಬ ಪಂಡಿತ ಭಗವದ್ಗೀತೆಯ ವ್ಯಾಖ್ಯಾನ ಮಾಡುತ್ತಿದ್ದನು. ಒಬ್ಬ ಭಕ್ತನು ಅದನ್ನು ಕೇಳುತ್ತ ಕಣ್ಣೀರು ಸುರಿಸುತ್ತಿದ್ದನು. ಚೈತನ್ಯನು ಅವನನ್ನು ಕುರಿತು, "ಏಕೆ ಅಳುತ್ತಿದ್ದೀಯೆ?" ಎಂದು ಕೇಳಿದನು. ಅದಕ್ಕೆ ಆ ಭಕ್ತನು, "ನನಗೆ ಗೀತೆಯ ಒಂದು ಪದವೂ ಅರ್ಥವಾಗುತ್ತಿಲ್ಲ. ಆದರೆ ಅದನ್ನು ಪಂಡಿತನು ಹೇಳುತ್ತಿದ್ದಾಗ, ನನ್ನ ಒಳಗಣ್ಣಿನಲ್ಲಿ ಭಗವಂತನ ಅಸಾಧಾರಣ ಸೌಂದರ್ಯವನ್ನು ನೋಡುತ್ತಿದ್ದೆನು. ಅವನು ರಥದಲ್ಲಿ ಕುಳಿತುಕೊಂಡು ಕುರುಕ್ಷೇತ್ರದ ರಣಾಂಗಣದಲ್ಲಿ, ಅರ್ಜುನನಿಗೆ ಗೀತೋಪದೇಶವನ್ನು ಮಾಡುತ್ತಿದ್ದನು. ಇದನ್ನು ನಾನು ಕಣ್ಣಾರೆ ಕಾಣುತ್ತಿದ್ದೆ. ನನ್ನ ಕಣ್ಣಿನಲ್ಲಿ ಆನಂದದ ಕಣ್ಣೀರು ಬರುವುದಕ್ಕೆ ಇದೇ ಕಾರಣ" ಎಂದು ಅವನು ಹೇಳಿದನು. ಚೈತನ್ಯನು ಅವನನ್ನು ಅಪ್ಪಿಕೊಂಡು, "ನಿನಗಷ್ಟೇ ಗೀತೆ ಅರ್ಥವಾಗಿದೆ" ಎಂದು ಕಣ್ಣೀರು ಸುರಿಸಿದನು.

೩. **ಭಕ್ತಿಯು ಸುಖದುಃಖಗಳಲ್ಲಿ ಸಮಾನವಾಗಿರಬೇಕು:** ಶ್ರೀಕೃಷ್ಣನು ಭಕ್ತನ ಲಕ್ಷಣಗಳನ್ನು ಭಗವದ್ಗೀತೆಯ ಹನ್ನೆರಡನೆಯ ಅಧ್ಯಾಯದಲ್ಲಿ ವಿಸ್ತಾರವಾಗಿ ತಿಳಿಹೇಳುತ್ತಾನೆ. ಅದರಲ್ಲಿ ಈ ಶ್ಲೋಕ ಬರುತ್ತದೆ: **ಯೋ ನ ಹೃಷ್ಯತಿ ನ ದ್ವೇಷ್ಟಿ ನ ಶೋಚತಿ ನ ಕಾಂಕ್ಷತಿ । ಶುಭಾಶುಭ ಪರಿತ್ಯಾಗೀ ಭಕ್ತಿಮಾನ್ ಯಃ ಸ ಮೇ ಪ್ರಿಯಃ ॥** – "ಯಾವನು ಹರ್ಷಿಸುವುದಿಲ್ಲವೋ, ದ್ವೇಷಿಸುವುದಿಲ್ಲವೋ, ಶೋಕಿಸುವುದಿಲ್ಲವೋ, ಯಾವುದನ್ನೂ ಇಚ್ಛಿಸುವುದಿಲ್ಲವೋ, ಶುಭ–ಅಶುಭಗಳನ್ನು ಪರಿತ್ಯಾಗ ಮಾಡಿರುತ್ತಾನೋ, ನನ್ನಲ್ಲಿ ಭಕ್ತಿಯುಳ್ಳ ಅಂಥವನೇ ನನಗೆ ಪ್ರಿಯನು" (೧೨–೧೭).

ಭಗವಂತನು ತನಗೆ ಕೇವಲ ಸುಖವನ್ನು ಮಾತ್ರ ಕೊಡಬೇಕು ಎಂದು ಭಕ್ತನು ಆಶಿಸಬಾರದು. ಸುಖದುಃಖಗಳೆರಡರಲ್ಲಿಯೂ ಭಗವಂತನನ್ನು ಏಕಪ್ರಕಾರವಾಗಿ ಪ್ರೀತಿಸಬೇಕು. ಎಲ್ಲವೂ ಭಗವಂತನ ಇಚ್ಛೆಯಂದೇ ಬಗೆಯಬೇಕು. ಇದನ್ನು ಸುಂದರವಾಗಿ ನಿರೂಪಿಸುವ ಭಕ್ತ ನೇಕಾರನೊಬ್ಬನ ಕಥೆಯನ್ನು ಶ್ರೀರಾಮಕೃಷ್ಣರು ಹೇಳುತ್ತಿದ್ದರು: ಒಂದು ಊರಿನಲ್ಲಿ ಒಬ್ಬ ನೇಯ್ಗೆಯವನು ಇದ್ದನು. ಅವನು ಬಹಳ ಪ್ರಾಮಾಣಿಕ, ಭಗವದ್ಭಕ್ತ. ತಾನು ನೇಯ್ದ ಬಟ್ಟೆಯನ್ನು ಸಂತೆಯಲ್ಲಿ ಅವನು ವ್ಯಾಪಾರ ಮಾಡುತ್ತಿದ್ದನು. ಯಾರಾದರೂ ಬೆಲೆ ಕೇಳಿದರೆ, "ರಾಮನ ಇಚ್ಛೆಯಿಂದ ನೂಲಿನ ಬೆಲೆ ಒಂದು ರೂಪಾಯಿ, ಕೂಲಿಯ ಬೆಲೆ ನಾಲ್ಕಾಣೆ. ರಾಮನ ಇಚ್ಛೆಯಿಂದ ಲಾಭ ಎರಡಾಣೆ. ಹೀಗೆ ಬಟ್ಟೆಯ ಒಟ್ಟು ಬೆಲೆ ರಾಮನ ಇಚ್ಛೆಯಿಂದ ಒಂದು ರೂಪಾಯಿ ಆರಾಣೆ." ಜನರಿಗೆ ನೇಯ್ಗೆಯವನ ಮೇಲೆ ತುಂಬ ನಂಬಿಕೆ. ಅವನು ಹೇಳಿದಷ್ಟು ಕೊಟ್ಟು ಬಟ್ಟೆಯನ್ನು ಕೊಳ್ಳುತ್ತಿದ್ದರು. ನೇಯ್ಗೆಯವನು ಗಿರಾಕಿಗಳು ಕೊಟ್ಟ ದುಡ್ಡನ್ನು ಪಂಚೆಗೆ ಕಟ್ಟಿಕೊಳ್ಳುವನು. ಸಂಜೆಯ ಹೊತ್ತು ಊಟವಾದ ಮೇಲೆ ಬಹಳ ಕಾಲ ರಾಮನನ್ನು ಕುರಿತು ಧ್ಯಾನ ಮಾಡುವನು; ಅವನ ಮಹಿಮೆಯನ್ನು ಕುರಿತು ಕೊಂಡಾಡುವನು. ಒಂದು ದಿನ ರಾತ್ರಿ ಎಷ್ಟು ಹೊತ್ತಾದರೂ ಅವನಿಗೆ ನಿದ್ರೆ ಬರಲಿಲ್ಲ. ಆಗ ಒಂದು ದರೋಡೆಕೋರರ ದಂಡು ಅತ್ತ ಕಡೆ ಬಂದಿತು. ಅವರು ನೇಯ್ಗೆಗಾರನನ್ನು, "ನಮ್ಮ ಜೊತೆಯಲ್ಲಿ ಬಾ" ಎಂದು ಕರೆದರು. ಅವನನ್ನು ಎಳೆದುಕೊಂಡು ಹೋದರು. ಒಂದು ಮನೆಯಲ್ಲಿ ಕಳ್ಳತನ ಮಾಡಿದರು. ಇವನ ಮೇಲೆ ಕದ್ದ ಸಾಮಾನನ್ನು ಹೊರಿಸಿದರು. ಅಷ್ಟರಲ್ಲಿ ಪೊಲೀಸಿನವರು ಬಂದರು. ನೇಯ್ಗೆಯವನು ಸಿಕ್ಕಿಬಿದ್ದನು. ಮಾರನೆಯ ದಿನ ಅವನನ್ನು ನ್ಯಾಯಾಧೀಶರ ಮುಂದೆ ನಿಲ್ಲಿಸಲಾಯಿತು. ನ್ಯಾಯಾಧೀಶನು "ಇದು ಹೇಗಾಯಿತು, ಹೇಳು" ಎಂದು ಕೇಳಿದನು. ಆಗ ನೇಯ್ಗೆಯವನು, ಎಲ್ಲವೂ ರಾಮನ ಇಚ್ಛೆಯಂತೆಯೇ ನಡೆಯಿತು ಎಂದು ಆದದ್ದನ್ನೆಲ್ಲಾ ವಿಸ್ತಾರವಾಗಿ ಹೇಳಿದನು. ಕಡೆಗೆ, "ರಾಮನ ಇಚ್ಛೆಯಂತೆ ಪೊಲೀಸರು ನನ್ನನ್ನು ಜೈಲಿಗೆ ಕರೆದುಕೊಂಡು ಹೋದರು. ಇವತ್ತಿನ ಬೆಳಗ್ಗೆ ರಾಮನ ಇಚ್ಛೆಯಂತೆ ನನ್ನನ್ನು ನಿಮ್ಮ ಮುಂದೆ ನಿಲ್ಲಿಸಿದ್ದಾರೆ" ಎಂದನು. ಅವನಿಗೆ ಖುಲಾಸೆ ಆಯಿತು. ಮನೆಗೆ ಹೋಗುವಾಗ ದಾರಿಯಲ್ಲಿ, "ರಾಮನ ಆಣತಿಯಂತೆ ನನ್ನನ್ನು ಸೆರೆಮನೆಯಿಂದ ಬಿಡುಗಡೆ ಮಾಡಿದರು" ಎಂದುಕೊಂಡು ಹೋದನು. ಈ ಕಥೆ ಹೇಳಿ ಶ್ರೀರಾಮಕೃಷ್ಣರು ಹೇಳುತ್ತಾರೆ: " ನೀನು ಈ ಸಂಸಾರದಲ್ಲಿ ಇರುವೆಯೋ ಅಥವಾ ಅದನ್ನು ತ್ಯಜಿಸುವೆಯೋ, ಎಲ್ಲಾ ರಾಮನ ಇಚ್ಛೆಯ ಮೇಲಿದೆ. ದೇವರ ಮೇಲೆ ಭಾರ ಹಾಕಿ ನಿನ್ನ ಪಾಲಿನ ಕೆಲಸವನ್ನು ಮಾಡು."